
# ರಂಗಚೇತನ

- ಹಿರಿಯ ರಂಗಕರ್ಮಿ ಶ್ರೀ ಎಸ್. ಎಂ. ಖೇಡಗಿಯವರ ಅಭಿನಂದನ ಗ್ರಂಥ -



ಗೌರವ ಸಂಪಾದಕರು

ವಾಸುದೇವ ಹೆರಕಲ್ಲ

ಡಾ. ಜಿ. ಡಿ. ಕೊಟ್ನಾಳ

ಪ್ರಧಾನ ಸಂಪಾದಕರು

ಪ್ರೊ. ಯು.ಎನ್. ಕುಂಟೋಜಿ

ರಾಜೇಂದ್ರಕುಮಾರ್ ಬಿ. ಬಿರಾದಾರ್

25. ರಂಗಜಂಗಮನ ಬಣ್ಣದಯಾನ – ರಾಜೇಂದ್ರಕುಮಾರ್ ಬಿ. ಬಿರಾದಾರ್ 140
26. ಕರುಣಾಮಯಿ – ರುಕ್ಸಾನಾ ನದಾಫ್ 145
(ಕನ್ನಡಕ್ಕೆ : ರಾಜೇಂದ್ರಕುಮಾರ್ ಬಿ. ಬಿರಾದಾರ್)
27. ಬಂಗಾರದ ಮನುಷ್ಯ – ಪಾಕೀಜಾ ನದಾಫ್ 147
(ಕನ್ನಡಕ್ಕೆ : ರಾಜೇಂದ್ರಕುಮಾರ್ ಬಿ. ಬಿರಾದಾರ್)
28. ನೀನೇ ನನ್ನ ತಂದೆಯಾಗು – ಜಮೀರ್ ಶೇಡಗಿ 149
(ಕನ್ನಡಕ್ಕೆ : ರಾಜೇಂದ್ರಕುಮಾರ್ ಬಿ. ಬಿರಾದಾರ್)
29. ಭಾವೈಕ್ಯ ರಂಗಚೇತನ – ಮಲ್ಲಿಕಾರ್ಜುನ ಜಿ. ಭೃಂಗಿಮಠ 152
30. ರಂಗಭೂಮಿಯ ಭೀಷ್ಮ – ಪ್ರೊ. ಮಹಾದೇವ ರೆಬಿನಾಳ 159
31. ರಂಗಚೇತನದ ಶಕ್ತಿ – ಅಂಬಾದಾಸ ಜೋಷಿ 161
32. ಸಜ್ಜನರಿಗೆ ಶರಣ ದುರ್ಜನರಿಗೆ ಮರಣ – ಡಾ. ವಿ.ಡಿ.ಐಹೊಳ್ಳಿ 162

## ವ್ಯಕ್ತಿಗತ ಬದುಕು–ಸಾಧನೆ (ಪದ್ಯ)

33. ರಂಗನಾಯಕ – ರಾಜೇಂದ್ರಕುಮಾರ್ ಬಿ. ಬಿರಾದಾರ್ 166
34. ನನ್ನಣ್ಣ – ಪಾಕೀಜಾ ನದಾಫ್ 168
(ಕನ್ನಡಕ್ಕೆ : ರಾಜೇಂದ್ರಕುಮಾರ್ ಬಿ. ಬಿರಾದಾರ್)
35. ನನ್ನ ತಂದೆ – ರುಕ್ಸಾನಾ ನದಾಫ್ 169
(ಕನ್ನಡಕ್ಕೆ : ರಾಜೇಂದ್ರಕುಮಾರ್ ಬಿ. ಬಿರಾದಾರ್)
36. ಅಭಿನವಭಾರ್ಗವ – ರಂಗನಾಥ ಅಕ್ಕಲಕೋಟ 170
37. ರಂಗಚೇತನ – ಸೋಮಶೇಖರ ಕುರ್ಲೆ 174
38. ಅಭಿನಂದನೆ – ಡಾ. ವಿ.ಡಿ.ಐಹೊಳ್ಳಿ 175
39. ರಂಗಮಂದಿರ – ಅಂಬರೀಶ್ ಎಸ್. ಪೂಜಾರಿ 177

## ಭಾಗ–3 ನಾಟಕ ಸಾಹಿತ್ಯ ವಿಮರ್ಶೆ 178

1. ಮಾತು ಅಂಗಾರ ಮೌನ ಬಂಗಾರ – ಪ್ರೊ. ಜಿ.ಆರ್.ಕುಲಕರ್ಣಿ 179
2. ನಿಮ್ಮಂಥವರಿಗೆ ನಮ್ಮಂಥವರೇ ಬೇಕು – ಪ್ರಭಾವತಿ ಎಸ್. ದೇಸಾಯಿ 183
3. ತಾಯಿಯ ಋಣ ಹಾಲಿನ ಗುಣ – ಡಾ. ವಿ.ಎಂ.ಬಾಗಾಯತ 188
4. ನನ್ನ ಗಂಡನ ಹೆಂಡತಿ – ಸಿದ್ಧಲಿಂಗ ಮನಹಳ್ಳಿ 192
5. ಗರಗದ ಮಡಿವಾಳೇಶ್ವರ ಮಹಾತ್ಮೆ – ಶಂಕರ ಬೈಚಬಾಳ 195
6. ಗೌರಿ ಹೋದಳು, ಗಂಗೆ ಬಂದಳು – ದಾಕ್ಷಾಯಣಿ ರ. ಬಿರಾದಾರ 198
7. ಕಿತ್ತೂರು ಚೆನ್ನಮ್ಮ – ಡಾ. ರೇಖಾ ಬಿ. ಪಾಟೀಲ 202
8. ಶ್ರೀ ಯಲ್ಲಾಲಿಂಗ ಮಹಾತ್ಮೆ – ಜಂಬುನಾಥ ಕಂಚ್ಯಾಣಿ 206
9. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ – ಡಾ. ಎಂ.ಎಸ್.ಮಾಗಣಗೇರಿ 211
10. ಅಪ್ಪನ ಗಂಡ ಅವ್ವ – ಸಿದ್ಧಲಿಂಗ ಹದಿಮೂರ 215
11. ತಂಗಿ ಕೊಟ್ಟ ಕಾಣಿಕೆ – ಡಾ. ಪುಷ್ಪಾವತಿ ಶಲವಡಿಮಠ 221
12. ಹುತಾತ್ಮ ಅಮಟೂರ ಬಾಳಾಸಾಹೇಬ – ಡಾ. ಹರೀಶ ಹೆಗಡೆ 226
13. ಹಗಲ ಚಿಕ್ಕಿ ಮುಗಿಲ ಬಣ್ಣ – ಬಸಮ್ಮ ಎನ್. ಘಿರಡಿಮಠ 230
14. ಇಲ್ಲಿ ಸುಮ್ಮನೆ ಅಲ್ಲಿ ನಮ್ಮನೆ – ಯುವರಾಜ ಮಾದನಶೆಟ್ಟಿ 234

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

– ಡಾ.ಎಂ.ಎಸ್. ಮಾಗಣಗೇರಿ,

ಕಿತ್ತೂರು ಸಂಸ್ಥಾನ, ರಾಣಿ ಚನ್ನಮ್ಮ ಮತ್ತು ಚನ್ನಮ್ಮನ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನ ಕುರಿತು ವಿಪುಲ ಸಾಹಿತ್ಯವಿದೆ. ಈ ಕುರಿತಾಗಿ ಜನಪದ ಲಾವಣಿ, ಗೀಗಿಪದ, ಹಾಡು, ಕಥೆ, ಕಥನಗೀತೆ, ಕಾದಂಬರಿ, ನಾಟಕ ಮೊದಲಾದ ಪ್ರಕಾರಗಳಲ್ಲಿ ಸಾಕೆನ್ನುವಷ್ಟರ ಮಟ್ಟಿಗೆ ಕೃತಿಗಳು ರಚನೆಯಾದರೂ ಪ್ರತಿಯೊಂದರಲ್ಲಿ ಹೊಸತನ ಕಂಡುಬರುತ್ತದೆ. ಅಂತಹದರಲ್ಲಿ ಎಸ್.ಎಂ. ಖೇಡಗಿಯವರ "ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ" ಕೃತಿಯು ವೃತ್ತಿ ರಂಗಭೂಮಿಗಾಗಿ ರಚಿಸಿದ ಸಂಪೂರ್ಣ ಐತಿಹಾಸಿಕ ನಾಟಕವಾಗಿದೆ. ಇವರ ಸಮಕಾಲೀನರಾದ ಎಚ್.ಟಿ. ಮಹಾಂತ ಶಾಸ್ತ್ರೀಗಳು 'ಸಂಗೊಳ್ಳಿ ರಾಯಣ್ಣ' ಮತ್ತು ಎಚ್.ಎನ್. ಹೂಗಾರ ಅವರು 'ಸಂಗೊಳ್ಳಿ ರಾಯಣ್ಣ' ಎಂಬ ವೃತ್ತಿ ರಂಗಭೂಮಿ ನಾಟಕಗಳನ್ನು ರಚಿಸಿದ್ದರೂ ಖೇಡಗಿಯವರ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ನಾಟಕ ಜನಮನ್ನಣೆ ಗಳಿಸುವುದರೊಂದಿಗೆ ಹೆಚ್ಚು ಪ್ರದರ್ಶನ ಕಂಡು ಜನಪ್ರೀಯವಾಗಿದೆ.

ಹೆಸರೇ ಸೂಚಿಸುವಂತೆ ಕಿತ್ತೂರು ಚನ್ನಮ್ಮ ಬ್ರಿಟಿಷರೊಂದಿಗೆ ಮಾಡಿದ ಕೊನೆಯ ಕಾಳಗದಲ್ಲಿ ರಾಯಣ್ಣ ವಿರೋಧಿಗಳ ಸಿಂಹಸ್ವಪ್ನನಾಗಿದ್ದ. ರಾಜ್ಯದ/ಸಂಸ್ಥಾನದ ಉಳಿವಿಗಾಗಿ ಪ್ರಾಣವನ್ನೇ ಪಣ್ಣಕ್ಕಿಟ್ಟು ಹೋರಾಡಿದ ಉಜ್ವಲ ದೇಶಪ್ರೇಮಿಯಾಗಿದ್ದಾನೆ. ವೈರಿ ಸೆರೆ ಸಿಕ್ಕರೂ ಸೇಡಿಗಾಗಿ ಮುಂದಾಗದೆ ಧರ್ಮಪಾಲಿಸುವ ಚನ್ನಮ್ಮ ರಾಣಿ ತನ್ನವರ ವಂಚನೆಯಿಂದಲೇ ಸೋತು ಸೆರೆಯಾಗಬೇಕಾಯಿತು. ನಂತರ ಸಂಸ್ಥಾನದ ಉಳಿವಿಗಾಗಿ ಹೋರಾಡಿದ ಕಿತ್ತೂರಿನ ವೀರಭೂಪಾಲ ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ ದುರಂತ ಈ ನಾಟಕದ ಕಥಾವಸ್ತುವಾಗಿದೆ.

ಚನ್ನಮ್ಮ ರಾಣಿಯ ಶೌರ್ಯವನ್ನು ಕಂಡು ಬ್ರಿಟಿಷ ಸರಕಾರ ಗಾಬರಿಗೊಂಡಿತು. ಚನ್ನಮ್ಮ ಥ್ಯಾಕರೆಯನ್ನು ಕೊಂದದ್ದಲ್ಲದೆ, ಅವನ ಕೈಕೆಳಗಿನ ಅನೇಕ ಅಧಿಕಾರಿಗಳನ್ನು ಸೆರೆ ಹಿಡಿದಳು. ಆಗ ಕಿತ್ತೂರಿನ ಜನರ ಸಂತೋಷ, ಉತ್ಸಾಹಕ್ಕೆ ಪಾರವೇ ಇಲ್ಲದಂತಾಗುತ್ತದೆ. ದೇವ ಮಂದಿರಗಳಲ್ಲಿ, ಮಸೀದಿಗಳಲ್ಲಿ ಪೂಜೆ-ಪ್ರಾರ್ಥನೆಗಳು ಸಲ್ಲಿಸಲ್ಪಡುತ್ತವೆ. ಜನ ಸಂತೋಷಭರಿತರಾಗಿ ಹಬ್ಬ ಆಚರಿಸುತ್ತಾರೆ. ಈ ಪ್ರಥಮ ವಿಜಯದಿಂದ ಚನ್ನಮ್ಮ ಉತ್ತೇಜಿತಳಾಗಿದ್ದರೂ ಸಮಾಧಾನಗೊಂಡಿರಲಿಲ್ಲ. ಬ್ರಿಟಿಷರು ಈ ಸೋಲನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವವರಲ್ಲ ಎನ್ನುವುದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಅದಕ್ಕಾಗಿ ತನ್ನ ಪ್ರಜೆಗಳನ್ನು ಹುರಿದುಂಬಿಸಿ ಸೈನ್ಯವನ್ನು ಮತ್ತೆ ಸಜ್ಜುಗೊಳಿಸುತ್ತಾಳೆ. ರಾಯಣ್ಣ ಅದರ ಮುಂದಾಳತ್ವ ವಹಿಸಿಕೊಂಡು ಕಿತ್ತೂರು ಸಂಸ್ಥಾನದ ಉಳಿವಿಗಾಗಿ ಹೋರಾಡುತ್ತಾನೆ.

ಇದನ್ನರಿತ ಬ್ರಿಟಿಷ ಅಧಿಕಾರಿಗಳು ರೊಚ್ಚಿಗೆದ್ದು ಎಲ್ಲ ಕಡೆಯಿಂದಲೂ ತಮ್ಮ ಸೈನ್ಯವನ್ನು ಅಣಿಗೊಳಿಸುತ್ತಾರೆ. ಮೊದಲನೆ ಯುದ್ಧದಲ್ಲಿ ಸೋತು ಸೆರೆಸಿಕ್ಕ ಅಧಿಕಾರಿ ಕ್ವಾರ್ಟರ್‌ನನ್ನು ರಕ್ಷಿಸುವ ದೃಷ್ಟಿಯಿಂದ ಕಿತ್ತೂರಿನವರೇ ಆದ ವೆಂಕನಗೌಡ, ಲಿಂಗನಗೌಡ,

ನೈತಿಕ ಮೌಲ್ಯಗಳು ವ್ಯಕ್ತಿಯ ಮನಸ್ಸಿನ ಮೇಲೆ ಪರಿಣಾಮ ಬೀರುವುದರಿಂದ ಆತನಲ್ಲಿ ಬದಲಾವಣೆಗೊಳ್ಳಲು ನಾಟಕ ಸಾಹಿತ್ಯ ಸಾಕಷ್ಟುಮಟ್ಟಿಗೆ ಪ್ರೇರಣೆ ಆಗಿದೆ. ನೆಲ, ಜಲ ಭಾಷೆ, ಸಂಸ್ಕೃತಿ, ಇತಿಹಾಸದ ಕುರುಹು ಅರುಹುವ ಕಾರ್ಯ ಸಾಹಿತ್ಯದಿಂದ ಸಾಧ್ಯ. ದೇಶದ ಸಂಸ್ಕೃತಿ, ಭೌತಿಕ ಅಭಿವೃದ್ಧಿ ನೋಡಿ ದರ್ಶನ ಮಾಡಿಕೊಳ್ಳಲು ಸಾಧ್ಯವಿಲ್ಲ. ಬುದ್ಧಿ ಜೀವಿಗಳು ಮುಂದಿನ ಪೀಳಿಗೆಗೆ ಬಿಟ್ಟು ಹೋಗಿರುವ ಗ್ರಂಥಗಳಿಂದ ಮಾತ್ರ ಸಾಧ್ಯ. ಈ ಮಹತ್ತರ ಕಾರ್ಯ ಶ್ರೀ ಎಸ್.ಎಂ.ಖೇಡಗಿಯವರು ಮಾಡಿದ್ದಾರೆ.

– ಪರಮಪೂಜ್ಯ ಶ್ರೀ ಬಸವರಾಜೇಂದ್ರ ಮಹಾಸ್ವಾಮಿಗಳು ವಿರಕ್ತಮಠ, ಖೇಡಗಿ, ತಾ॥ ಇಂಡಿ, ಜಿ॥ ವಿಜಯಪುರ.

ವೃತ್ತಿ ರಂಗಭೂಮಿಯನ್ನು ಉಸಿರಾಗಿಸಿಕೊಂಡು ಲೇಖಕ, ಕವಿ, ನಿರ್ದೇಶಕ, ನಟ ರಂಗಕರ್ಮಿಯಾಗಿ, ರಜತ ಮಹೋತ್ಸವ ಆಚರಿಸಿಕೊಂಡ "ರಂಗಚೇತನ" ಸಂಸ್ಥೆಯನ್ನು ಹುಟ್ಟುಹಾಕಿ ಅದರ ಅಡಿಯಲ್ಲಿ ಹಲವಾರು ನಾಟಕಗಳು ಪ್ರದರ್ಶನಗೊಂಡು ಜನಮನ ಸೂರೆಗೊಳ್ಳುವಲ್ಲಿ ಶ್ರೀ ಶೇಖ್ ಮೋಹಿದ್ದೀನ್ ಚಾಂದ್‌ಸಾಬ್ ಖೇಡಗಿಯವರ ಪಾತ್ರ ಅನನ್ಯವಾದುದು.

– ಪ.ಪೂ. ಡಾ.ಎಫ್.ಎಚ್. ಇನಾಮದಾರ, ಸೂಫಿಸಂತರು, ಪೀಠಾಧಿಪತಿಗಳು, ಹುಸೇನಪೀರ ಆಶ್ರಮ, ಮನಗೂಳಿ

ನನ್ನ ಬಾಲ್ಯದಿಂದ ಇದುವರೆಗಿನ ಮೂರು ದಶಕಗಳ ಜೀವನ ಖೇಡಗಿಯವರ ರಂಗಗಂಗೆಯ ಇಕ್ಕೆಲಗಳಲ್ಲಿಯೇ ರೂಪ ಹಾಗೂ ಆಕೃತಿಯನ್ನು ಪಡೆದಿದೆ. ನನ್ನ ಸೃಜನಶೀಲತೆಯ ಕಣ್ಣರಳಿದ್ದು ಖೇಡಗಿಯವರ ರಂಗಕಾವ್ಯದಲ್ಲಿ. ನಾವು ಬೆಳೆದು, ಬದುಕು ಹಾಗೂ ಭಾಷೆಗಳನ್ನು, ಜೀವನ ವ್ಯವಹಾರ ಹಾಗೂ ಸಾಮಾಜಿಕತೆಗಳನ್ನು ಕಲಿತಿದ್ದು, ಈ ಖೇಡಗಿ ಎಂಬ ಸಾಧಕರ ರಂಗದೀಕ್ಷಾ ಕೇಂದ್ರದಲ್ಲಿಯೆ. ಹೀಗಾಗಿ ಅವರು ನಮಗೆ ರಂಗಮಂಡಲವಷ್ಟೇ ಅಲ್ಲ ಬಾಳಮಂಡಲವೂ ಕೂಡಾ.

– ಡಾ॥ ರಾಜಶೇಖರ ಮಠಪತಿ (ರಾಗಂ), ಸಾಹಿತಿಗಳು, ಬೆಂಗಳೂರು.

ಖೇಡಗಿಯವರು ನನ್ನೊಡನೆ ಮಾತನಾಡಲು ಪ್ರಾರಂಭಿಸಿದರೆ ಅನೇಕ ಪೌರಾಣಿಕ, ಐತಿಹಾಸಿಕ ಅಷ್ಟೇ ಏಕೆ ; ಪ್ರಸ್ತುತ ವಿದ್ಯಮಾನಗಳ ಬಗ್ಗೆ ಉರ್ದು ಶೇರ್ ಶಾಯರಿಗಳು ಅವರಿಂದಲೇ ಕೇಳಬೇಕು. ಶಬ್ದಗಳ ಉಚ್ಛಾರಣೆ, ವ್ಯಾಕರಣ ಶುದ್ಧ ನುಡಿ, ಸ್ವಚ್ಛ ಆಚಾರ-ವಿಚಾರ ಇವುಗಳು ನಾನು ಅವರಲ್ಲಿ ಮೆಚ್ಚಿದ ಅಂಶಗಳು. ಅವರ ಮಾತಿನಲ್ಲಿ ನನಗೂ ಗೊತ್ತಿಲ್ಲದಿದ್ದ ಎಷ್ಟೋ ವಿಷಯಗಳು ಹೊರ ಹೊಮ್ಮುತ್ತಿದ್ದವು. ಇವರು ವಿಜಯಪುರ ಜಿಲ್ಲೆಗೆ ಅಷ್ಟೇ ಅಲ್ಲ, ಇಡೀ ಕರ್ನಾಟಕಕ್ಕೆ ಖ್ಯಾತರಾಗಿದ್ದಾರೆ.

– ಶ್ರೀನಿವಾಸ ಜಿ. ಕಪ್ಪಣ್ಣ, ಮಾಜಿ ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

ಖೇಡಗಿಯವರು ಎಂದ ತಕ್ಷಣ ನನಗೆ ನೆನಪಾಗುವುದು 1980ರ ದಶಕದ ಗುಲ್ಬರ್ಗಾದ ಆತ್ಮೀಯರಾದ ವಿಜಯಶೇಖರ ಆನೆಗುಂದಿಯವರು. ಅವರಿಂದ ನನಗೆ ಪರಿಚಯವಾದಂತಹ ಸಹೃದಯ ವ್ಯಕ್ತಿಯೇ ಇವರು. ಶ್ರೀ ಎಸ್. ಎಮ್. ಖೇಡಗಿ ಗುರುಗಳ ಮೇಲೊಂದು "ಅಭಿನಂದನ ಗ್ರಂಥ" ಹೊರಬರುತ್ತಿರುವ ವಿಚಾರ ತಿಳಿದು ನನ್ನ ಹೃದಯ ತುಂಬಿ ಬಂದಿದೆ.

– ಎಮ್. ಮಾಲತಿಶ್ರೀ, ಹಿರಿಯ ಕಲಾವಿದೆ, ಮೈಸೂರು

ನನ್ನ ಮತ್ತು ಖೇಡಗಿಯವರ ಪರಿಚಯ ಸುಮಾರು 40 ವರ್ಷಕ್ಕೂ ಹಿಂದಿನದು. 1978ರಲ್ಲಿ ವಿಜಯಪುರ ಕ್ಯಾಂಪ್‌ನಲ್ಲಿ ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಕಂಪನಿಯಲ್ಲಿ ಅವರೇ ಬರೆದ 'ನಿಮ್ಮ ಹೆಂಡತಿ ನಾನಲ್ಲ' ನಾಟಕದಲ್ಲಿ ಅಂಬುಜಾ ಹಾಸ್ಯ ಪಾತ್ರ ನಾನು ಮಾಡಿದ್ದೆ. ನನ್ನ 65 ವರ್ಷಗಳ ಅನುಭವದಲ್ಲಿ ಅನೇಕ ನಾಟಕ ರಚಿಸುವ ಕವಿಗಳನ್ನು ನೋಡಿದ್ದೇನೆ. ಅದರಲ್ಲಿ 8-10 ಜನ ಮಾತ್ರ ಧ್ರುವನಕ್ಷತ್ರಗಳು. ಆ ನಕ್ಷತ್ರಗಳಲ್ಲಿ ನಮ್ಮ ಖೇಡಗಿ ಕವಿಗಳು ಕೂಡಾ ಒಬ್ಬರು ಎಂದರೆ ತಪ್ಪಾಗಲಾರದು.

– ಕೆ. ಜಯಲಕ್ಷ್ಮಿ ಪಾಟೀಲ, ಹಿರಿಯ ಕಲಾವಿದೆ, ಬೆಂಗಳೂರು



ಪ್ರಕಾಶನ
ಶ್ರೀ ಎಸ್.ಎಂ. ಖೇಡಗಿ
ಅಭಿನಂದನ ಸಮಿತಿ, ವಿಜಯಪುರ